ದಿನಾಂಕಃ 01-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ಪ್ರತಿವಾದಿ ಪರವಾಗಿಃ ಶ್ರೀ. ಜಿ.ಎಸ್.ಆರ್.ವಕೀಲರಿಂದಃ-**

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಗಣಕೀಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ.1 ಎಂದು, ವಾದಿ 1 ನೇ ಪ್ರತಿವಾದಿಗೆ ನೀಡಲಾದ ಮೂಲ ಸಾಮಾನ್ಯ ಅಧಿಕಾರ ಪತ್ರ ಕಳೆದುಹೋಗಿದ್ದು, ಅದಕ್ಕೆ ಬದಲಾಗಿ ಸಾಮಾನ್ಯ ಅಧಿಕಾರ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.2 ಎಂದು, ಆ ಅಧಿಕಾರ ಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿ ಮಾಡಿಕೊಂಡ ಕ್ರಯ ಪತ್ರದ ಗಣಕೀಕೃತ ಪ್ರತಿಯನ್ನು ತಕರಾರಿಗೆ ಒಳಪಟ್ಟು ನಿಡಿ3 ಎಂದು ಗುರುತಿಸಲಾಯಿತು (ಮೂಲ ಪ್ರತಿ ಕಳೆದು ಹೋಗಿರುತ್ತದೆ). 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದು, ಆ ದಾನ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ.4 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟ ಒಂದು ಪಟ್ಟಾ ಪುಸ್ತಕವನ್ನು ನಿಡಿ.5 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಒಟ್ಟು 2 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ.6 ಮತ್ತು 7 ಎಂದು, ಮೂಲ ಸಾಮಾನ್ಯ ಅಧಿಕಾರ ಪತ್ರ ಮತ್ತು ಮೂಲ ಕ್ರಯ ಪತ್ರ ಕಳೆದು ಹೋಗಿರುವ ಬಗ್ಗೆ ಕಾವಲಿ ಪೊಲೀಸ್ ಠಾಣೆಗೆ ದೂರು ನೀಡಿದ್ದು ಈ ಬಗ್ಗೆ ಪೊಲೀಸರು ನೀಡಿದ ಹಿಂಬರವನ್ನು

ಹಾಜರುಪಡಿಸಿದ್ದು ಅದನ್ನು ನಿಡಿ.8 ಎಂದು, ಆ ದಾಖಲೆಗಳು ಕಳೆದುಹೋದ ಬಗ್ಗೆ ಆಂಧ್ರ ಪ್ರದೇಶದಲ್ಲಿರುವ ವಾರ್ತಾ ದಿನಪತ್ರಿಕೆಗೆ ಪ್ರಚಾರಪಡಿಸಿರುವ ಬಗ್ಗೆ ದಿಃ26.10.2019 ರ ದಿನಪತ್ರಿಕೆಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ.9 ಎಂದು, ಅದರ ಕನ್ನಡ ಅವತರಿಣಿಕೆಯ ಪ್ರತಿಯನ್ನು ನಿಡಿ.9(ಎ) ಎಂದು ಗುರುತಿಸಲಾಯಿತು.

ಆದ್ದರಿಂದ, ದಾವೆಯನ್ನು ವಜಾ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-**

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ